(ದಿನಾಂಕಃ 27-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟಿ ಸವಾಲು ಃ ಶ್ರೀ ಎಸ್ ಎಸ್ ಎಸ್ 7 ನೇ ಪ್ರತಿವಾದಿ ಪರ ವಕೀಲರಿಂದ -

ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಈಗ 44 ವರ್ಷ ವಯಸ್ಸು ಇರುತ್ತದೆ. ನಾನು ಹುಟ್ಟಿದ ದಿನಾಂಕ 15-02-1979. ಶೆಟ್ಟೆಪ್ಪನಿಗೆ ಮದುವೆ ಆಗಿರುವುದಿಲ್ಲ. ಘೂಳಪ್ಪ ಇವರಿಗೆ 3 ಜನ ಮಕ್ಕಳು. ಅವರು ಶೆಟ್ಟೆಪ್ಪ , ಬಾಳಪ್ಪ ಮತ್ತು ತಂಗೆವ್ವ. 2 ನೇ ಪ್ರತಿವಾದಿ ಘೂಳಪ್ಪ ಇವರು ನನ್ನ ಗಂಡ ಎಂದರೆ ಸರಿ . ಘೂಳಪ್ಪ ಇವರು ಮಿಲಿಟರಿ ನೌಕರಿ ಮಾಡಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ . ಘೂಳಪ್ಪ ಅವರಿಗೆ ಈಗ 58 ವರ್ಷ ವಯಸ್ಸು . 10 ವರ್ಷ ಟೋಲ ನಾಕಾದಲ್ಲಿ ಕೆಲಾ ಮಾಡಿ ಈಗ ಸ್ಧ್ಯ ಅವರು ಮನೆಯಲ್ಲಿ ಇರುತ್ತಾರೆ. ಅವರಿಗೆ ಕಣ್ಣು ಕಾಣಿಸುತ್ತಿದ್ದು ಮತ್ತು ಕಿವಿ ಕೇಳಿಸುತ್ತವೆ ಹಾಗೂ ಸದೃಢವಾಗಿದ್ದಾರೆ ಎಂದರೆ ಸರಿ . ಅವರಿಗೆ ಯಾವುದೇ ರೋಗಗಳು ಇಲ್ಲ ಎಂದರೆ ಸರಿ . ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆಗುತ್ತದೆ ಎಂದರೆ ಸರಿ . ಅವರು ನನ್ನ ಹೆಸರಿಗೆ ಒಟ್ಟು ಮುಖ್ತ್ಯಾರನಾಮೆ ಬರೆದುಕೊಟ್ಟಿದ್ದರು ಎಂರೆ ಸರಿ . ಆಗ ಅವರಿಗೆ ರಜೆ ಕೊಡದೇ ಇರುವ ಕಾರಣ ನ್ಯಾಯಾಲಯಕ್ಕೆ ಬರಲು ಆಗುತ್ತಿರಲಿಲ್ಲ. ಈಗ ಅವರ ಸಾಕ್ಷಿ ಮಾಡಿಸುವ ಪ್ರಸಂಗ ಬಂದರೆ ಮಾಡಿಸುತ್ತೇನೆ.



ಮಾರುತಿ ಬಾಳಪ್ಪಾ ಬಂಗಾಗಿ ನನ್ನ ಮೈದುನ ಎಂದರೆ ಸರಿ . ಅವರೂ ಸಹ ಈಗ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ . ಅವರು ನಿವೃತ್ತಿ ಆದ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ 12-12-1969 ರಂದು ನಮ್ಮ ಮಾವ ಬಾಳಪ್ಪನಿಗೆ ಶೆಟ್ಟೆಪ್ಪ ಅರ್ಧ ಹಿಸ್ಸೆ ಆಸ್ತಿಯನ್ನು ಬರೆದುಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಅದು ಡೈರಿ ನಂ. 2052 ರಂತೆ ಪಾಸ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ-14 ರಂತೆ ಶೆಟ್ಟೆಪ್ಪ ಬಾಳಪ್ಪನಿಗೆ ಬರೆದುಕೊಟ್ಟ ಬಗ್ಗೆ ವರದಿ ಇದೆ ಎಂದರೆ ಸರಿಯಲ್ಲ. ಯು ಫಾರ್ಮನಲ್ಲಿ ಬಾಳಪ್ಪ ಮತ್ತು ಶೆಟ್ಟೆಪ್ಪ ಇವರ ಇಬ್ಬರ ಸಹಿಗಳು ಇವೆ ಎಂದರೆ ಸರಿಯಲ್ಲ. ನಮ್ಮ ಮಾವ ಬಾಳಪ್ಪ ಜೀವಂತ ಇದ್ದಾಗ ಡೈರಿ ನಂ.2052 ಇದು ತಪ್ಪು ಇದೆ ಎಂದು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೇವೆ. ಡೈರಿ ನಂ. 2052 ಮಂಜೂರು ಆಗುವ

ಮೊದಲು  ಶೆಟ್ಟೆಪ್ಪನ ಹೆಸರಿನಲ್ಲಿದ್ದವು ಎಂದರೆ ನನಗೆ ಗೊತ್ತಿಲ್ಲ.  ಅದರ ಪ್ರಕಾರ ಶೆಟ್ಟೆಪ್ಪ ಅರ್ಧ ಶೇರು ಮತ್ತು ಬಾಳಪ್ಪನಿಗೆ ಅರ್ಧ ಶೇರು ಬರುತ್ತದೆ ಎಂದರೆ ಸರಿಯಲ್ಲ.

ದಾವಾಸ್ತಿಗಳು ನಮ್ಮ ಅಜ್ಜ ಘೂಳಪ್ಪನಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿ ಸರ್ವೆ ನಂ. 475  ಮತ್ತು 374 ಇರುತ್ತವೆ.  ಅವುಗಳ ಕ್ಷೇತ್ರ  ಒಂದು ಜಮೀನು 4 ಎಕರೆ ಇನ್ನೊಂದು ಜಮೀನು 8 ಗುಂಟೆ ಇರುತ್ತದೆ .  ದಿನಾಂಕ  21-6-1962  ರಂದು ಶೆಟ್ಟೆಪ್ಪ ಈತನು 7 ನೇ ಪ್ರತಿವಾದಿಯ ಹೆಸರಿನಲ್ಲಿ ಒಂದು ಭಕ್ಷೀಸು ಪತ್ರ ಮಾಡಿ ಕೊಟ್ಟಿರುತ್ತಾನೆ ಎಂದರೆ ಸುಳ್ಳು ಇರುತ್ತದೆ. ಸದ್ರಿ ಭಕ್ಷೀಸು ಪತ್ರ ನೊಂದಣಿ ಆಗಿರುತ್ತದೆ ಎಂದರೆ ಸುಳ್ಳು .  ಭಕ್ಷೀಸು ಪತ್ರವನ್ನು ನಾವು ಪ್ರಶ್ನಿಸಿ  ಮೇಲ್ಮನವಿ ಸಲ್ಲಿಸಿರುತ್ತೇವೆ ಆ ಬಗ್ಗೆ ದಾಖಲಾತಿಗಳನ್ನು ಹಾಜರ ಪಡಿಸಿರುತ್ತೇವೆ. ಡೈರಿ ನಂ.  2056 ಇದು ದಿನಾಂಕ 10-03-1970 ರಂದು  ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿಯು ಆ ಡೈರಿ ನಂ. 2056 ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ.  1970 ರಿಂದ 2006 ರ ವರೆಗೆ  ದಾವಾ ಜಮೀನಿನ ಉತಾರಗಳಲ್ಲಿ  7 ನೇ ಪ್ರತಿವಾದಿಯ ಹೆಸರು ದಾಖಲ ಆಗಿರುತ್ತವೆ ಎಂದರೆ ಸುಳ್ಳು ಇರುತ್ತದೆ.  ನಾನು ಹುಟ್ಟಿದ್ದು 1979 ರಲ್ಲಿ  ಹಾಗೂ ಈ ಡೈರಿ ದಾಖಲ ಆಗಿದ್ದು 1970 ಎಂದರೆ ಸರಿ .



ಶೆಟ್ಟೆಪ್ಪ ಇವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ಆತನು 1983 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಇರಬಹುದು.  ಶೆಟ್ಟೆಪ್ಪ ಜೀವಂತ ಇದ್ದಾಗ ಭಕ್ಷೀಸು ಪತ್ರ ತಪ್ಪು ಇದೆ ಎಂದು ಪ್ರಶ್ನಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. 1995 ರಿಂದ  ನಾವು ಸದ್ರಿ ಡೈರಿಯನ್ನು ಪ್ರಶ್ನೆ ಮಾಡಿರುತ್ತೇವೆ.  ನಿ.ಡಿ-1 ರ ಭಕ್ಷೀಸು ಪತ್ರದಲ್ಲಿ ಶೆಟ್ಟೆಪ್ಪ ಈತನು 7 ನೇ ಪ್ರತಿವಾದಿಯು ಅಜ್ಞಾನ ಇದ್ದು ನನ್ನ ಹೆಂಡತಿಯ ಮೊದಲನೆ ಗಂಡನ ಮಗನು ಇದ್ದು  ಸಣ್ಣಂದಿನಿಂದ ನನ್ನಿಂದ ಸಂರಕ್ಷಿಸಲ್ಪಟ್ಟಿರುತ್ತಾನೆ ಎಂದು ನಮೂದಿಸಿರುತ್ತಾನೆ ಎಂದರೆ ಸರಿಯಲ್ಲ. ಭಕ್ಷೀಸು ಪತ್ರದಲ್ಲಿ 7 ನೇ ಪ್ರತಿವಾದಿಗೆ 1/4 ಅಂಶ ದಾವಾ ಜಮೀನಿನಲ್ಲಿ ಬರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ.  ಸಾಮಾನ್ಯವಾಗಿ ಮಕ್ಕಳನ್ನು ಶಾಲೆಗೆ ದಾಖಲು ಮಾಡುವಾಗ ಪೋಷಕರೆ  ಮಾಹಿತಿ ಕೊಟ್ಟು ಹೆಸರು ಹಚ್ಚುತ್ತಾರೆ ಎಂದರೆ  ಸರಿ .

ನಿ.ಡಿ-13 ರ ಜನನ ಪ್ರಮಾಣ ಪತ್ರದಲ್ಲಿ ಶಿವಣೆವ್ವ ಶೆಟ್ಟೆಪ್ಪ ಹೊಲೇರ ಎಂದು ನಮೂದಿಸಿದೆ ಎಂದರೆ ಸುಳ್ಳು . ಶಿವಣೆವ್ವ ಎಲ್ಲಿ ಹುಟ್ಟಿರುತ್ತಾರೆ ಎಂದು ನಾವು ವಿಚಾರಣೆ ಮಾಡಿರುವುದಿಲ್ಲ . ಅವರು ನಮ್ಮ ಮನೆಯಲ್ಲಿ ಹುಟ್ಟಿರುವುದಿಲ್ಲ. ಶಿವಣೆವ್ವ ನನಗೆ ಹುಟ್ಟಿಲ್ಲ ಎಂದು ಶೆಟ್ಟೆಪ್ಪನೇ ಪ್ರಶ್ನೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಿ.ಡಿ-8 ರ ಶಾಲಾ ಪ್ರಮಾಣ ಪತ್ರದಲ್ಲಿ ಬಸಪ್ಪ ಶೆಟ್ಟೆಪ್ಪ ಹೊಲೇರ ದಿನಾಂಕ 20-05-1948 ರಂದು ಜನಿಸಿರುತ್ತಾನೆ ಎಂದು ನಮೂದಿಸಲಾಗಿದೆ ಎಂದರೆ ಸುಳ್ಳು .

ಶೆಟ್ಟೆಪ್ಪನ ಹೆಂಡತಿ ಶಿವಲಿಂಗವ್ವ ಎಂದರೆ ಸರಿಯಲ್ಲ. ಆತನಿಗೆ ಮದುವೆ ಆಗಿರುವುದಿಲ್ಲ. ಶವಲಿಂಗವ್ವ ಮತ್ತು ಶೆಟ್ಟೆ ಇವರ ದಾಂಪತ್ಯದಿಂದ ಶಿವಣವ್ವ @ ನ್ಯಾಮವ್ವ , ತುಳಸವ್ವ ಮತ್ತು ವಾದಿ ಬಸವ್ವ ಇವರು ಮೂರು ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ಸುಳ್ಳು . ವಾದಿ ಬಸವ್ವ ಇವರಿಗೆ ಈಗ 58 ವರ್ಷಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪ ತೀರಿಕೊಂಡ ಬಳಿಕ ದಿನಾಂಕ 8-8-1984 ರಲ್ಲಿ ಈ ಮೂರು ಜನ ಹೆಣ್ಣು ಮಕ್ಕಳು ವಾರಸಾ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾರಸಾ ಪ್ರಮಾಣ ಪತ್ರ ಸುಳ್ಳು ಇದೆ ಎಂದು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30-10-1995 ರಂದು ನಿ.ಡಿ-16 ರ ಡೈರಿ ನಂ. 3907 ರಂತೆ ಬಾಳಪ್ಪ ಮತ್ತು ಶೆಟ್ಟೆಪ್ಪ ಇವರು ಇಬ್ಬರೂ



ಅರ್ಧ ಹಿಸ್ಸೆಯಂತೆ ಹಾಗೂ ತಂಗೆವ್ವ ಇವರು ಕಬೂಲಿಪತ್ರ ಮಾಡಿಕೂಟ್ಟಿರುತ್ತಾಳೆ ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ಕಾಲಂ ನಂ. 3 ರಲ್ಲಿ ಸರ್ವೆ ನಂ. 475 ರಲ್ಲಿ 1/4 ಮತ್ತು ಸರ್ವೆ ನಂ. 374 ರಲ್ಲಿ 1/4 ಎಂದು ನಮೂದು ಇದೆ ಎಂದರೆ ಸರಿಯಲ್ಲ.

ದಿನಾಂಕ 8-8-1984 ರಲ್ಲಿ 3 ಜನ ಹೆಣ್ಣು ಮಕ್ಕಳು ಮತ್ತು ಅವರ ತಾಯಿ ಬಸ್ಸಪ್ಪ ಇವರ ಹೆಸರಿನಲ್ಲಿ ದಾವಾಸ್ತಿ ದಾಖಲ ಆಗಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಡೈರಿ ನಂ. 3116 ಆಗಿದೆ ಎಂದರೆ ಸರಿಯಲ್ಲ. ಸದ್ರಿ ಡೈರಿಯಲ್ಲಿ ಎರಡೂ ದಾವಾಸ್ತಿಗಳ ಮುಂದೆ 1/4 ಅಂಶ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ 1984 ರಿಂದ ದಾವಾಸ್ತಿ ಪಹಣಿಗಳಲ್ಲಿ ಬಸಪ್ಪನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಆರ್ ಟಿ ಎಸ್

ನಂ. 38/2000 ರ ಎಸಿ ಯವರ ನ್ಯಾಯಾಲಯದಲ್ಲಿ 1/4 ಅಂಶ ಕೋರಿ ಹಾಗೂ ಡೈರಿ ನಂ. 3115 ನ್ನು ರದ್ದುಪಡಿಸುವ ಸಲುವಾಗಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ಎಸಿಯವರ ಆದೇಶ 1/4 ಅಂಶಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದರೆ ಸರಿಯಲ್ಲ.

ಡೈರಿ ನಂ. 1056 ನೇದ್ದ ರ ಬಗ್ಗೆ ಎಸಿಯವರ ಆದೇಶದಲ್ಲಿ ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ . ಭಕ್ಷೀಸು ಪತ್ರದ ಪ್ರಕಾರ 1/4 ಹಿಸ್ಸೆ ಹಾಗೂ ವಾರಸಾ ಪ್ರಮಾಣ ಪತ್ರದ ಪ್ರಕಾರ 1/4 ಹಿಸ್ಸೆ 7 ನೇ ಪ್ರತಿವಾದಿಗೆ ಬರುತ್ತದೆ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**